**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ**

**ಸಿಸಿ ನಂ 54/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 18-09-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಶರೀಫ್‌ಸಾಬ್ ಮಿಶ್ರಿಕೋಟಿ | **ಪ್ರಾ.ಸಾ ಃ 09** |
| **ತಂದೆ ಃ ಗಂಡ ಹೆಸರು** | ಃ | ಅಲಿಸಾಬ್ | **ಚಾ.ಸಾ ಃ 11** |
| **ವಯಸ್ಸು** | ಃ | 62 ವರ್ಷ | |
| **ಉದ್ಯೋಗ** | ಃ | ನಿವೃತ್ತ ಮುಖ್ಯ ಪೇದೆ. | |
| **ವಾಸಸ್ಥಳ** | ಃ | ನೂಲ್ವಿ, ಹುಬ್ಬಳ್ಳಿ ತಾಲೂಕ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ನಾನು 2013 ರಿಂದ ಸಪ್ಟಂಬರ್ 2017 ರವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 21.05.2017 ರಂದು ಠಾಣಾ ಪ್ರಭಾರದಲ್ಲಿದ್ದಾಗ ನ್ಯಾಯಾಲದಿಂದ ಬಂದ ಖಾಸಗಿ ದೂರನ್ನು ಸ್ವೀಕರಿಸಿ ಅದರ ಮೇರೆಗೆ ಠಾಣಾ ಗುನ್ನೆ ನಂ 186/2017 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯೊಂದಿಗೆ ದೂರನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-26, ಸಾಕ್ಷಿ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪ್ರಥಮ ವರ್ತಮಾನ ವರದಿಯನ್ನು ಯಾವ ಸಮಯಕ್ಕೆ ಕಳುಹಿಸಿಕೊಟ್ಟಿದ್ದೇನೆಂದು ಹೇಳಲು ಬರುವುದಿಲ್ಲ. ನ್ಯಾಯಾಲಯದಿಂದ ಬಂದ ಮಾಹಿತಿಯನ್ನು ದಿನಾಂಕ 21.05.2017 ರಂದು ಸಾಯಂಕಾಲ 4-00 ಗಂಟೆಗೆ ಪಡೆದುಕೊಂಡಿರುತ್ತೇನೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.